ಉತ್ತರಿಸದಿದ್ದಾಗ ಮೆಲ್ಲಗೆ ಬಾಗಿಲು ಮುಂದಕ್ಕೆ ಎಳೆದುಕೊಂಡು ರಸ್ತೆಗಿಳಿದು ನಡೆದು ಮನೆಗೆ ಬಂದ.

ಮನೆಗೆ ಬಂದ ಮಾದನನ್ನು ನಿಂಗಿ, 'ಸಾಹೇಬ್ರು ಏನಂದ್ರು...' ಎಂದು ಕೇಳಿದಳು. 'ಏನೂ ಅನ್ನಲಿಲ್ಲ...' ಅಂದದ್ದು ಕೇಳಿ ತುಸು ಸಿಟ್ಟುಗೊಂಡ ನಿಂಗಿ, 'ನೀನೊಂತರ ಮೂಗುಬಸವ ಇದ್ದಂಗೆ... ಸಾಹೇಬ್ರು ಹತ್ರ ನಮ್ಮ ಕಷ್ಟ ವಸಿ ಹೇಳಕ್ಕಾಗಲಿಲ್ವಾ ನಿಂಗೆ...' ಎಂದು ಸಿಡಿಮಿಡಿಗೊಂಡಳು. 'ಅವೆಲ್ಲಾ ನಿಂಗೆ ಗೊತ್ತಾಗಕ್ಕಿಲ್ಲ ಸುಮ್ನಿರು...' ಎಂದು ಮಾದ ಅವಳನ್ನು ಸುಮ್ಮನಿರಿಸಿದ.

ಆದರೆ ಮಾರನೆ ದಿನ ಬೆಳಿಗ್ಗೆ ಎದ್ದ ನಿಂಗಿಯ ಮನಸ್ಸಿಗೆ ಯಾಕೋ ಸಮಾಧಾನವಿರಲಿಲ್ಲ. 'ಮೊದ್ಲು ಸಾಹೇಬ್ರ ಹತ್ರ ಹೋಗಿ ಮಾತಾಡ್ಕಂಡು ಅಂಗೇ ಬ್ಯಾಗು, ಡಬ್ಬಿ ಇಸ್ಕಂಡು ಬರೋಗು...' ಎಂದು ಒಂದೇ ಸಮನೆ ಗೊಣಗಾಡತೊಡಗಿದಳು. ವಿಧಿಯಿಲ್ಲದೆ ಮಾದ ಸಾಹೇಬರ ಕ್ವಾಟ್ರರ್ಸ್‌ನ ಕಡೆ ಹೆಜ್ಜೆ ಹಾಕಿದ.

ನಿಧಾನವಾಗಿ ನಡೆದುಕೊಂಡು ಸಾಹೇಬರ ಕ್ವಾಟರ್ಸ್‌ನ ಬಳಿ ಬಂದ ಮಾದನಿಗೆ ಮನಸ್ಸಿನಲ್ಲಿಯೇ ಸಾಹೇಬರನ್ನು ಹೇಗೆ ಮಾತನಾಡಿಸುವುದು, ಏನೆಂದು ಕೇಳುವುದು ಎಂದು ತಿಳಿಯದೇ ದಿಗಿಲಾಯಿತು. ಕಾಂಪೌಂಡಿನ ಆಚೆ ನಿಂತು ಒಮ್ಮೆ ಒಳಗೆ ಬಗ್ಗಿ ನೋಡಿದ. ಕ್ವಾಟ್ರರ್ಸ್‌ನ ಬಾಗಿಲು ಮುಚ್ಚಿತ್ತು. ಅಂದಿನ ದಿನ ಪತ್ರಿಕೆಗಳೆಲ್ಲ ಬಾಗಿಲ ಬಳಿಯಲ್ಲಿಯೇ ಬಿದ್ದಿದ್ದವು. ಸಾಹೇಬರು ಎದ್ದಿದ್ದಾರೋ ಮಲಗಿದ್ದಾರೋ ತಿಳಿಯಲಿಲ್ಲ. ಇನ್ನೂ ಮಲಗಿದ್ದರೆ ಬಾಗಿಲು ತಟ್ಟಿದಾಗ ಸಿಟ್ಟು ಮಾಡಿಕೊಂಡುಬಿಟ್ಟಾರೆಂದು ಭಯವಾಗಿ ದೂರದಲ್ಲಿ ನಿಂತಿದ್ದು, ಅವರೇ ಬಾಗಿಲು ತೆರೆದಾಗ ನೋಡಿಕೊಂಡು ಒಳಗೆ ಹೋಗೋಣವೆಂದು ಕಾಂಪೌಂಡಿನ ಬದಿಯಲ್ಲೇ ನಡೆದು ಅತ್ತ ಹೋದ.

ಕಾಂಪೌಂಡಿಗೆ ಹೊಂದಿಕೊಂಡಿದ್ದ ಸಣ್ಣ ಚರಂಡಿಯ ಬದಿಯಲ್ಲಿ ಕಾಣಿಸಿದ ದೃಶ್ಯದಿಂದ ಮಾದನಿಗೆ ಆಘಾತವಾದಂತಾಗಿ ಹೊಟ್ಟೆಯೆಲ್ಲಾ ಉರಿದುಹೋಯಿತು. ಅವನು ರಾತ್ರಿ ತಂದುಕೊಟ್ಟಿದ್ದ ಬಿರಿಯಾನಿಯ ಸುಮಾರು ಅರ್ಧಕ್ಕಿಂತ ಹೆಚ್ಚಿನ ಭಾಗ ಗುಪ್ಪೆಯಾಗಿ ಅಲ್ಲಿ ಬಿದ್ದಿತ್ತು. ರಾತ್ರಿ ಅದೇ ಬಿರಿಯಾನಿಯನ್ನು ಆಸೆಗಣ್ಣುಗಳಿಂದ ನೋಡುತಿದ್ದ ಮಕ್ಕಳ ಮುಖ ನೆನಪಾಗಿ ತೀವ್ರ ಬೇಸರವಾಯಿತು. ಯಾಕೋ ಏನೋ ಸಾಹೇಬರನ್ನು ಭೇಟಿ ಮಾಡುವ ಮನಸ್ಸಾಗಲಿಲ್ಲ. 'ಎಲ್ಲಾರೂ ಮಾಡಿದಂಗೆ ನಾನೂ ಮಾಡಿದೀನಿ... ಏನಾಯ್ತದೋ ಆಗ್ಲಿ... ದೇವ್ರು ಇಟ್ಟಂಗಾಯ್ತದೆ...' ಎಂದು ಸಮಾಧಾನ ಮಾಡಿಕೊಂಡು ಮನೆಯತ್ತ ಹೆಜ್ಜೆ ಹಾಕಿದ.

## ಟಿ. ತಿಮ್ಮಪ್ಪ

ತುಮಕೂರು ಜಿಲ್ಲೆ ಕುಣಿಗಲ್ ತಾಲ್ಲೂಕಿನ ತಿಪ್ಪೂರು ತಿಮ್ಮಪ್ಪ ಅವರ ಊರು. ಅವರ ಮೊದಲ ಕಾದಂಬರಿ 'ಜಂಬೂಕ' 'ಸುಧಾ' ವಾರಪತ್ರಿಕೆಯಲ್ಲಿ ಧಾರಾವಾಹಿಯಾಗಿ ಪ್ರಕಟವಾಗಿದೆ. ಅವರು ಪ್ರಸ್ತುತ ತುಮಕೂರಿನ ಸರ್ಕಾರಿ ಪಾಲಿಟೆಕ್ನಿಕ್‌ನಲ್ಲಿ ಆಯ್ಕೆ ಶ್ರೇಣಿ ಉಪನ್ಯಾಸಕರಾಗಿ ಕೆಲಸ ಮಾಡುತ್ತಿದ್ದಾರೆ. ಈ ಲೇಖಕರ ಸುಮಾರು ಇಪ್ಪತ್ತು ಕಿರುಗತೆ, ಸಣ್ಣಕತೆ, ನೀಳ್ಗತೆಗಳು 'ಸುಧಾ', 'ಮಯೂರ' ಮತ್ತಿತರ ಪತ್ರಿಕೆಗಳಲ್ಲಿ ಪ್ರಕಟವಾಗಿವೆ.